ಇ) ಯೋಜನಾ ವರದಿಗೆ ನಿಗಮದ ತಾಂತ್ರಿಕ ಸಲಹಾ ಸಮಿತಿಯು ಒಪ್ಪಿಗೆ ನೀಡಿದ ನಂತರ, ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ನೀಡಿ ಕಾಮಗಾರಿ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಈ ಯೋಜನೆಯನ್ನು ಪೂರ್ಣಗೊಳಿಸಲು ಸುಮಾರು 3 ವರ್ಷಗಳ ಸಮಯ ಬೇಕಾಗುತ್ತದೆ.

ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂನಲ್ಲಿ ರಾಜಾ ಲಕ್ಕಂಗೌಡ ಜಲಾಶಯದಲ್ಲಿ ಮೈಸೂರು ಮಾದರಿಯ ಬೃಂದಾವನ ನಿರ್ಮಿಸುವುದು

2471 (2775) ಶ್ರೀ ಉಮೇಶ್ ವಿಶ್ವನಾಥಕತ್ತಿ (ಹುಕ್ಕೇರಿ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್ ಡ್ಯಾಂನಲ್ಲಿ ರಾಜಾ ಲಕ್ಕಂಗೌಡ ಜಲಾಶಯದಲ್ಲಿ ಮೈಸೂರು ಬೃಂದಾವನ ಮಾದರಿಯ ಹೂದೋಟವನ್ನು ಪ್ರಾರಂಭಿಸುವ ಯೋಜನೆಯು ಸರ್ಕಾರದ ಯಾವ ಹಂತದಲ್ಲಿದೆ.

ಆ. ಉತ್ತರ ಕರ್ನಾಟಕದಲ್ಲಿ ಮೈಸೂರು ಬೃಂದಾವನದ ಮಾದರಿಯಲ್ಲಿ ಈ ಜಲಾಶಯದಲ್ಲಿಯೂ ಬೃಂದಾವನ ನಿರ್ಮಿಸಲು ಸರ್ಕಾರವು ಹಾಕಿಕೊಂಡ ಕಾಲಬದ್ಧ ಕ್ರಮಗಳೇನು ;

ಇ. ಈ ಬೃಂದಾವನದ ಕಾಮಗಾರಿಯನ್ನು ಪ್ರಾರಂಭಿಸಲು ಇರುವ ತೊಂದರೆಯೇನು; ಯಾವಾಗ ಪ್ರಾರಂಭಿಸಲಾಗುವುದು; ಇಲ್ಲವೇ ಈ ಯೋಜನೆಯನ್ನು ಕೈಬಿಡಲಾಗುವುದೇ, ಈ ನಿಟ್ಟಿನಲ್ಲಿ ಸರ್ಕಾರ ತೆಗೆದುಕೊಳ್ಳುವ ನಿಲುವೇನು?

ಶ್ರೀ ಎಚ್.ಕೆ ಪಾಟೀಲ್ (ಜಲಸಂಪನ್ಮೂಲ ಮಂತ್ರಿ) :—

ಅ), ಆ), ಇ) ದಿನಾಂಕ: 21-04-2001 ರಂದು ನಡೆದ ಅಧಿಕಾರಿಗಳ ಮಟ್ಟದ ಸಭೆಯಲ್ಲಿ, ರಾಜ್ಯದ ಹಲವು ಜಲಾಶಯಗಳನ್ನು ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಗಿದೆ. ಅದರಂತೆ ಮೊದಲನೇ ಹಂತದಲ್ಲಿ ಏಳು ಜಲಾಶಯಗಳನ್ನು ಅಭಿವೃಧಿಪಡಿಸಲು ಯೋಜಿಸಲಾಗಿದೆ. ಇದರಲ್ಲಿ ಹಿಡಕಲ್ ಜಲಾಶಯವೂ ಸೇರಿರುತ್ತದೆ. ಈ ಬಗ್ಗೆ ಮುಂದಿನ ಕ್ರಮ ಜರುಗಿಸಲು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ, ರವರಿಗೆ ಆದೇಶ ನೀಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹೊಸ ವಿದ್ಯುತ್ ಸ್ಟೇಷನ್

2478 (2807) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.